**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.448/2023**

**CW -6 PW-5**

| | | |
|---|---|---|
| ಸಾಕ್ಷಿದಾರಳ ಹೆಸರು | ಃ | ಮಾರೇಮ್ಮ |
| ಗಂಡ | ಃ | ಹನುಮಂತ |
| ವಯಸ್ಸು | ಃ | 40 |
| ಉದ್ಯೋಗ | ಃ | ಮನೆಗೆಲಸ |
| ವಾಸಸ್ಥಳ | ಃ | ಗಣೇಕಲ್ |
| ಪ್ರಮಾಣಿಕರಿಸಿದ ದಿನಾಂಕ | ಃ | **19-02-2026** |

---

**<u>ಮುಖ್ಯ ವಿಚಾರಣೆ:-</u> ಮಾನ್ಯ ಸ.ಸ.ಅ ರವರಿಂದ**

ಚಾಸಾ-1 ಮತ್ತು 4 ನನ್ನ ಮಾವಂದಿರು, ಚಾಸಾ-5 ನನ್ನ ಅಣ್ಣ, ಚಾಸಾ-7 ನನ್ನ ತಾಯಿ, ಚಾಸಾ-8 ನನ್ನ ತಮ್ಮ. ಆರೋಪಿತರು ಗೊತ್ತು. ಈಗ 3 ವರ್ಷಗಳ ಹಿಂದೆ ಗಣೇಕಲ್ ಜಾತ್ರೆಯ ಸಂದರ್ಭದಲ್ಲಿ ನಾವು ಜಾತ್ರೆಗೆ ಬಂದಿದ್ದು, ಜಾತ್ರೆಯ ಮರುದಿನ ನಾವೆಲ್ಲರು ಮನೆಯಲ್ಲಿ ಇದ್ದಾಗ ಬೆಳಿಗ್ಗೆ 09-00 ರಿಂದ 09-30 ರ ಸುಮಾರಿಗೆ ಆರೋಪಿತರು ಏಕಾಏಕಿ ಬಂದು ನನ್ನ ತಮ್ಮ ನಾಗರಾಜನಿಗೆ 1 ನೇ ಆರೋಪಿ ಪಾರ್ವತಿ, 2 ನೇ ಆರೋಪಿ ಮಲ್ಲಿಕಾರ್ಜುನ ಮತ್ತು 3 ನೇ ಆರೋಪಿ ಲಿಂಗಮ್ಮ ಚಪ್ಪಲಿಯಿಂದ ಹೊಡೆದು ಅವಾಚ್ಯ ಶಬ್ದಗಳಿಂದ ಬೈದಿದ್ದು ಆಗ ನನ್ನ ತಾಯಿ ಮತ್ತು ನಾವು ಬಿಡಿಸಲು ಹೋದಾಗ ಆರೋಪಿತರು ನನ್ನ ತಾಯಿಯ ಕೂದಲು ಹಿಡಿದು ಎಳೆದಾಡಿ ನನ್ನ ತಾಯಿಗೆ ಕಾಲಿನಿಂದ ಹೊದ್ದಿರುತ್ತಾರೆ. ನಮ್ಮ ಮನೆಯಲ್ಲಿ 2 ನೇ ಆರೋಪಿಯ ಅಣ್ಣ ವಕೀಲನಿರುತ್ತಾನೆ ಎಂದು ಹೇಳಿ ನಿಮ್ಮನ್ನು ಸಾಯಿಸಿ ಬಿಡುತ್ತೇವೆ ಎಂದು ಕೋಲೆ ಬೇದರಿಕೆ ಹಾಕಿರುತ್ತಾರೆ. ಸದರಿ ಘಟನೆಯ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೇ ಇರುವ ಎಡಗಾಲಿನ ಚಪ್ಪಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು:-</u> ಆರೋಪಿತರ ಪರ ಶ್ರೀ. ವಿ.ಡಿ.ಸಿ ವಕೀಲರಿಂದ.**

ನಮ್ಮ ತಂದೆ ತಾಯಿಗೆ 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣುಮಕ್ಕಳು ಇರುತ್ತೇವೆ. ನಾಗರಾಜ, ವೀರುಪಾಕ್ಷ ಮತ್ತು ಶಿವು ಎಂದು 3 ಜನ ಗಂಡು ಮಕ್ಕಳು ಇರುತ್ತಾರೆ. 1 ನೇ ಆರೋಪಿ ನನ್ನ ತಮ್ಮ ಚಾಸಾ-8 ನಾಗರಾಜನ ಹೆಂಡತಿ ಆಗಿರುತ್ತಾರೆ. 1 ನೇ

ಆರೋಪಿಗೆ ನಾವು ಹೊಡೆ ಬಡೆ ಮಾಡಿದ್ದರಿಂದ ತವರು ಮನೆಯಲ್ಲಿ ವಾಸ ಇರುತ್ತಾಳೆ ಅಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ-8 ರವರ ವಿರುದ್ಧ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿರುತ್ತಾಳೆ ಅಂದರೆ ಸರಿ. ನನ್ನ ಗಂಡನ ಊರು ಸಹ ಎನ್. ಗಣೇಕಲ್ ಗ್ರಾಮವಾಗಿದ್ದು, ಬೆಂಗಳೂರಿಗೆ ದುಡಿದು ತಿನ್ನಲು ಹೋಗಿದ್ದು ಗ್ರಾಮಕ್ಕೆ ಬಂದಾಗ ನನ್ನ ತಾಯಿಯ ಮನೆಯಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಸಹೋದರರು ನಡುವೆ ವಿಭಾಗ ಆಗಿರುವುದಿಲ್ಲ ಎಲ್ಲರೂ ಒಂದೇ ಮನೆಯಲ್ಲಿ ವಾಸವಿರುತ್ತಾರೆ. ಜಾತ್ರೆಯ ದಿನಾಂಕ ನನಗೆ ಹೇಳಲು ಬರುವುದಿಲ್ಲ. ನನ್ನ ತಾಯಿಯ ಮನೆ ದಕ್ಷಿಣ ದಿಕ್ಕಿಗೆ ಮುಖ ಮಾಡಿ ಇರುತ್ತದೆ. ಸದರಿ ಮನೆಯಲ್ಲಿ 2 ಬೆಡ್ ರೂಮ್, ಹಾಲ್, ಅಡುಗೆ ಕೋಣೆ ಇರುತ್ತವೆ. ಘಟನೆಯ ಸಂದರ್ಭದಲ್ಲಿ ನಾನು ಅಡುಗೆಯ ಮನೆಯಲ್ಲಿ ಇದ್ದೆ. ನನ್ನ ತಾಯಿ ಮನೆಯ ಹೊರಗೆ ನೀರನ್ನು ಹಿಡಿಯುತ್ತಿದ್ದರು. ಆಗ ಮನೆಯಲ್ಲಿ ನನ್ನ ಗಂಡ ನನ್ನ ಮಕ್ಕಳು ಒಟ್ಟು ಎಲ್ಲರೂ ಸೇರಿ ಅಂದಾಜು 8-10 ಜನ ಇದ್ದೇವು.

ಮನೆಯ ಒಳಗೆ ಪಾರ್ವತಿ, ಮಲ್ಲಿಕಾರ್ಜುನ ಮತ್ತು ಲಿಂಗಮ್ಮ ಬಂದಿರುತ್ತಾರೆ. 2 ನೇ ಆರೋಪಿ ಮಲ್ಲಿಕಾರ್ಜುನ ನನ್ನ ತಮ್ಮನ ತಲೆಗೆ ಮೈ ಕೈಗೆ ಹೊಡೆದಿರುತ್ತಾನೆ. 1 ನೇ ಮತ್ತು 3 ನೇ ಆರೋಪಿತರು ನನ್ನ ತಾಯಿಯ ಕೂದಲು ಹಿಡಿದು ಎಳೆದಾಡಿ ಬಗ್ಗಿಸಿ ಹೊಡೆದಿರುತ್ತಾರೆ. ಯಾವ ಕಾರಣಕ್ಕಾಗಿ ಘಟನೆ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿತರು ಏಕಾಏಕಿ ಬಂದು ಹೋಡೆದಿರುತ್ತಾರೆ. ಸಾಕ್ಷಿ ಮುಂದುವರೆದು ಆರೋಪಿತರು ನಾಗರಾಜನನ್ನು ರೂ.50,000/- ಹಣ ಬೇಕು ಎಂದು ಬಂದು ಹೋಡೆದಿರುತ್ತಾರೆ. 1 ನೇ ಆರೋಪಿತಳು ತನ್ನ ಮಕ್ಕಳನ್ನು ಕರೆದುಕೊಂಡು ಗಣೇಕಲ್ ಜಾತ್ರೆಗೆ ಬಂದಿರುತ್ತಾಳೆ ಅಂದರೆ ಸಾಕ್ಷಿ ಘಟನೆ ದಿನ ಆಗಲೆ ಜಾತ್ರೆ ಮುಗಿದಿತ್ತು ಎಂದು ನುಡಿಯುತ್ತಾರೆ. 1 ನೇ ಆರೋಪಿ ತನ್ನ ಮತ್ತು ಮಕ್ಕಳ ಉಪಜೀವನಕ್ಕೆ ಹಣ ನೀಡುವಂತೆ 1 ನೇ ಆರೋಪಿ ಒಬ್ಬಳೆ ಕೇಳಿರುತ್ತಾಳೆ ಅಂದರೆ ಸರಿಯಲ್ಲ. ಆರೋಪಿಗೆ ಹಣ ನೀಡಬಾರದು ಎನ್ನುವ ಉದ್ದೇಶದಿಂದ ನಾವೇ 1 ನೇ ಆರೋಪಿಗೆ ಎಲ್ಲರೂ ಸೇರಿ ಹೊಡೆದಿರುತ್ತೇವೆ ಅಂದರೆ ಸರಿಯಲ್ಲ. ಘಟನೆ ಸಂದರ್ಭದಲ್ಲಿ ಅಂದಾಜು 10-12 ಜನ ಇದ್ದರು. ಅವರುಗಳೆಂದರೆ ನರಸಪ್ಪ, ತಾಯಮ್ಮ, ಹೊನ್ನಮ್ಮ, ಸಾಬಮ್ಮ, ಬಾಲಮ್ಮ, ಜಯಮ್ಮ, ನೀಲಮ್ಮ ಮತ್ತು ಇತರರು ಇದ್ದರು ಅವರಲ್ಲಿ ಇಬ್ಬರು

ಮೃತರಾಗಿರುತ್ತಾರೆ. ಸದರಿ ಜಗಳ ಮನೆಯ ಒಳಗೆ ಟಿ.ವಿ ಹಾಲ್.ನಲ್ಲಿ ಆಗಿರುತ್ತದೆ. ಮಲ್ಲಿಕಾರ್ಜುನ ಮಾತ್ರ ತನ್ನ ಎಡೆಗಾಲಿನ ಚಪ್ಪಲಿಯಿಂದ ನಾಗರಾಜನಿಗೆ ಹೊಡೆದಿರುತ್ತಾನೆ. 1 ಮತ್ತು 3 ನೇ ಆರೋಪಿತರು ಚಪ್ಪಲಿಯಿಂದ ನಾಗರಾಜನಿಗೆ ಹೊಡೆದಿರುವುದಿಲ್ಲ.

ಘಟನೆ ಆದ ದಿನಾಂಕ, ತಿಂಗಳು ಹೇಳಲು ಬರುವುದಿಲ್ಲ.ನಾನು ಘಟನಾ ಸ್ಥಳದಲ್ಲಿ ಇಲ್ಲದ ಸಂದರ್ಭದಲ್ಲಿ ಪೊಲೀಸರು ಬಂದು ವಿಚಾರಣೆ ಮಾಡಿಕೊಂಡು ಹೋಗಿರುತ್ತಾರೆ. ಘಟನಾ ಸ್ಥಳದ ಚಕ್ ಬಂದಿ ಹೇಳಲು ಬರುವುದಿಲ್ಲ. ಚಪ್ಪಲಿಯ ಯಾವ ಬಣ್ಣದ್ದು ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನ್ಯಾಯಾಲಯದ ಮುಂದೇ ಇರುವ ಚಪ್ಪಲಿಯಂತಾಹ ಚಪ್ಪಲಿಗಳು ಬೇರೆ ಕಡೆ ದೋರೆಯುತ್ತವೆ ಅಂದರೆ ಸರಿ.

1 ನೇ ಆರೋಪಿ ನಾಗರಾಜನಿಂದ ಹಣ ಕೇಳಬಾರದು ಎನ್ನುವ ಉದ್ದೇಶದಿಂದ ಯಾವುದೇ ಘಟನೆ ಆಗದೇ ಇದ್ದರು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ದೂರನ್ನು ದಾಖಲಿಸುವ ಪೂರ್ವದಲ್ಲಿಯೇ 1 ನೇ ಆರೋಪಿ ನಮ್ಮ ವಿರುದ್ಧ ಗಬ್ಬೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿರುತ್ತಾಳೆ ಅಂದರೆ ಸಾಕ್ಷಿಯು ನಮಗೆ ಹೊಡೆದು ಪುನ: ನಮಗೆ ಹೊಡೆದಿರುತ್ತಾರೆ ಎಂದು ಸುಳ್ಳು ಪ್ರಕರಣ ದಾಖಲಿಸಿರುತ್ತಾಳೆ ಎಂದು ನುಡಿಯುತ್ತಾರೆ. 4 ನೇ ಆರೋಪಿ ತಮ್ಮಣ್ಣ ವಕೀಲರು ಕುಲದವರಾಗಿರುತ್ತಾರೆ ಅಂದರೆ ಸರಿ. 1 ನೇ ಆರೋಪಿ ದೂರು ದಾಖಲಿಸಲು ತಮ್ಮಣ್ಣ ವಕೀಲರನ್ನು ಠಾಣೆಗೆ ಕರೆದುಕೊಂಡು ಹೋಗಿದ್ದರು ಅಂದರೆ ಸರಿ. 4 ನೇ ಆರೋಪಿ ನಮ್ಮ ವಿರುದ್ಧ 1 ನೇ ಆರೋಪಿ ಮೂಲಕ ಪ್ರಕರಣ ದಾಖಲಿಸುವಂತೆ ಮಾಡಿಸಿರುತ್ತಾನೆ ಎಂದು ನನ್ನ ಗಂಡ 4 ನೇ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿರುತ್ತಾನೆ ಅಂದರೆ ಸರಿ. ನನ್ನ ತಾಯಿ ಎನ್. ಗಣೇಕಲ್ ಗ್ರಾಮದಲ್ಲಿ ವೈದ್ಯರ ಬಳಿ ಚಿಕಿತ್ಸೆ ಪಡೆದಿರುತ್ತಾಳೆ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳುನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ. 4 ನೇ ಆರೋಪಿ ವಕೀಲರ ಪ್ರಚೋದನೆಯಿಂದ ಉಳಿದ ಆರೋಪಿತರು ಚಾಸಾ-8 ರವರಿಗೆ ಚಪ್ಪಲಿಯಿಂದ ಹೊಡೆದು ಅವಾಚ್ಯ ಶಬ್ದಗಳಿಂದ ಬೈದು 1 ಮತ್ತು 3 ನೇ ಆರೋಪಿತರು ನನ್ನ ತಾಯಿಯ ಕೂದಲು ಹಿಡಿದು ಎಳೆದಾಡಿ ಹೊಡೆದಿರುತ್ತಾರೆ ಎಂದು

ಮತ್ತು ಪ್ರಾಣ ಬೇದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. ನನ್ನ ಗಂಡ ಮತ್ತು ನನ್ನ ಸಹೋದರನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.